ಓ ಎಸ್ ನಂಃ 31–2015

ಪಿ ಡಬ್ಲ್ಯೂಃ 2

(ಸಾಕ್ಷಿಯನ್ನು ಪುನಃ ಕರೆಯಿಸಿ ದಿನಾಂಕ 28–08–2018 ರಂದು ಪ್ರಮಾಣ ವಚನ ಮಾಡಿಸಲಾಯಿತು.)

**ಪಾಟೀ ಸವಾಲುಃ ಶ್ರೀಮತಿ ಎಸ್ ಎನ್ ಹಚ್ ವಕೀಲರಿಂದಃ** ಅನಂತ ಕಲ್ಲು ಮನೆ ದಾಟಿದ ನಂತರ ಬಿ ಆರ್ ನಾಯಕ ನಂತರ ನಾರಾಯಣ ಬೀರಣ್ಣ ನಾಯಕ ಮತ್ತು ಸಾಕಷ್ಟು 10–20 ಮನೆಗಳು ಬರುತ್ತವೆ. ನನಗೆ ಮತ್ತು ವಾದಿ ನಂಬರ 1 ರವರಿಗೆ ಯಾವುದೇ ಸಂಬಂಧ ಇರುವುದಿಲ್ಲ. ನನ್ನ ಹಿರಿಯ ಮಗಳಾದ ಸುಮನಾ ಇವಳನ್ನು ಹಿಚ್ಕಡ ಗ್ರಾಮದ ಶೇಖರ ದೇವಣ್ಣ ನಾಯ್ಕ ಇವರಿಗೆ ಮದುವೆ ಮಾಡಿಕೊಟ್ಟಿದ್ದೇನೆ. ಶೇಖರ ದೇವಣ್ಣ ನಾಯ್ಕ ಇವರ ಅಣ್ಣನಿಗೆ 1ನೇ ವಾದಿಯ ಹೆಂಡತಿಯ ತಂಗಿಯನ್ನು ಮದುವೆ ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಿಚ್ಕಡಕ್ಕೆ ಹೋಗುವುದಿಲ್ಲ.1ನೇ ವಾದಿಯ ಹೆಂಡತಿಯ ತಂಗಿಯನ್ನು ನನ್ನ ಅಳಿಯನ ಅಣ್ಣನಿಗೆ ಮದುವೆ ಮಾಡಿಕೊಟ್ಟಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ನಿಜವಲ್ಲ.

(2) ನನ್ನ ಪ್ರಕಾರ ವಾದಿ ಮತ್ತು ಪ್ರತಿವಾದಿಯರ ಮದ್ಯೆ ಇರುವ ಬಾವಿಯನ್ನು ಯಾರು ಕಟ್ಟಿಸಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾಗರಕಟ್ಟೆ ಪ್ರತಿವಾದಿಯರ ಮನೆಯ ಕಡೆ ಮುಖ ಮಾಡಿ ಇದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ. 1 ನೇ ವಾದಿಯ ಮನೆಯ ಹತ್ತಿರ ಇರುತ್ತದೆ. ಬಾವಿಯಲ್ಲಿ ಎಷ್ಟು ವರ್ಷದಿಂದ ಗಡಗಡೆ ಉಪಯೋಗಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ . ನಾಗರಕಟ್ಟೆ ಕಟ್ಟಿ10– 15 ವರ್ಷ ಆಗಿರಬಹುದು. ನಿರ್ದಿಷ್ಟವಾಗಿ ಗೊತ್ತಿರುವುದಿಲ್ಲ. ನಾಗರ ಕಟ್ಟೆಯನ್ನು ಅನಂತ ಕಲ್ಲು ನಾಯಕ ಇವರು ಕಟ್ಟಿರುತ್ತಾರೆ. ವಾದಿ ತಾನೇ ಕಟ್ಟಿದ್ದೇನೆ ಎಂದು ಹೇಳಿದ್ದರಿಂದ ಹೇಳುತ್ತಿದ್ದೇನೆ. ನಮ್ಮ ಗ್ರಾಮದಲ್ಲಿ ನಾಗರಪಂಚಮಿಯ ದಿವಸ ನಾಗರಕಟ್ಟೆಗೆ ಪೂಜೆ ಮಾಡಲು ಹೋವುದಿಲ್ಲ, ನಮ್ಮ ಮನೆಯಲ್ಲಿಯೇ ಪೂಜೆ ಮಾಡುತ್ತೇವೆ. ಸಾಮಾನ್ಯವಾಗಿ ನಾಗರಪಂಚಮಿಯ ದಿನ ನಾಗರಕಟ್ಟೆಗೆ ಎಲ್ಲರೂ ಹೋಗಿ ಪೂಜೆ ಮಾಡಿಕೊಂಡು

ಬರುತ್ತಾರೆ ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ನಾವು ಹೋಗುವುದಿಲ್ಲ. ನಾಗರಕಟ್ಟೆಯನ್ನು ಪ್ರತಿವಾದಿಯರು ಪೂಜೆ ಮಾಡುತ್ತಾರೆ ಎಂದರೆ ನಿಜವಲ್ಲ. ನಾಗರಕಟ್ಟೆ ಪ್ರತಿವಾದಿಯ ತಂದೆಯ ತಂದೆ ಕಟ್ಟಿಸಿದ್ದಾರೆ ಎಂದರೆ ನಿಜವಲ್ಲ. ವಾದಿ ಕಟ್ಟಿಸಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ನಿಜವಲ್ಲ. ನಾನು ವಾಡೆಯಿಂದ 150 ಕಿ.ಮೀ ದೂರ ಇದ್ದವನು ಹಾಗೂ ವಾದಿ ನನಗೆ ಸಂಬಂಧಿಕ ಇರುವುದರಿಂದ ಅವರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ನಿಜವಲ್ಲ. ನಮ್ಮ ಮತ್ತು ಗೋಪಾಲ ಇವರ ಕುಮ್ಮಕ್ಕಿನ ಮೇಲೆ ವಾದಿ ದಾವೆ ಮಾಡಿದ್ದಾನೆ ಎಂದರೆ ನಿಜವಲ್ಲ. ನನಗೆ ದಾವೆಯಲ್ಲಿಯ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿಯರಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ನಿಜವಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಖ್ತ್ಲೇಖನದಲ್ಲಿ ಬೆರಳಚ್ಚಿಸಲಾಯಿತು)

ಓ.ಹೆ.ಕೆ. ಸರಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಅಂಕೋಲಾ.